**ದಿನಾಂಕಃ 20.11.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

1. ವಾದಿ ನನ್ನ ತಮ್ಮ. ತಟ್ಟೆಕೆರೆ ಗ್ರಾಮದ ಸರ್ವೆ ನಂ.14 ರಲ್ಲಿ 1 ಎಕರೆ 35 ಗುಂಟೆಯಷ್ಟು ಜಾಗ ವಾದಿಗೆ ಮಂಜೂರಾಗಿತ್ತು ಎಂದರೆ ಸರಿ. ಮಂಜೂರಾದ ನಂತರ ದುರಸ್ತಿಯಾದ ಮೇಲೆ ಸರ್ವೆ ನಂ.242 ಎಂದು ಆಗಿರುತ್ತದೆಂದರೆ ಸರಿ. ದುರಿಸ್ತಿಯಾದ ಮೇಲೆ ಸರ್ಕಾರದವರೇ ಅದರಂತೆ ಸ್ಕೆಚ್ ಮಡಿರುತ್ತಾರೆಂದರೆ ಸರಿ. ಸರ್ವೆ ನಂ.242 ರ ಪೂರ್ವಕ್ಕೆ ಸರ್ಕಾರಿ ಜಮೀನು, ಪಶ್ಚಿಮಕ್ಕೆ ನಮ್ಮ ಜಮೀನು ಎಂದರೆ ಸರಿ. ಉತ್ತರಕ್ಕೆ ಗಂಡಿನಾಯ್ಕ ಎಂದರೆ ಸರಿ, ದಕ್ಷಿಣಕ್ಕೆ ಸರ್ಕಾರಿ ಜಾಗ ಎಂದರೆ ಸರಿ. ಇದರಂತೆ ವಾದಿಯ ಹೆಸರಿನಲ್ಲಿ ಪಹಣಿ ಬರುತ್ತಿದೆ ಎಂದರೆ ಸರಿ. ಅದರಂತೆ ಅವರು ಸರ್ಕಾರಕ್ಕೆ ಕಂದಾಯ ಕಟ್ಟಿಕೊಂಡು ಸ್ವಾಧೀನದಲ್ಲಿದ್ದಾರೆಂದರೆ ಸರಿ. ವಾದಿಯು ಸದರಿ ಜಮೀನಿನಲ್ಲಿ ರಾಗಿ ಹಾಗೂ ಇತರೆ ದಾನ್ಯಗಳನ್ನು ಬೆಳೆಯುತ್ತಿದ್ದಾರೆಂದರೆ ಸರಿ.

2. ನಾನು ಪಶ್ಚಿಮಕ್ಕೆ ಇದ್ದು ಉಳುಮೆ ಮಾಡುವ ಸಂದರ್ಭದಲ್ಲಿ ವಾದಿಯ ಜಾಗವನ್ನು ಒತ್ತುವರಿ ಮಾಡಲು ಪ್ರಯತ್ನ ಮಾಡಿರುತ್ತೇನೆಂದರೆ ಸರಿಯಲ್ಲ. ನಾನು ಕೇವಲ 2 ಎಕರೆಯಲ್ಲಿ ವ್ಯವಸಾಯ ಮಾಡುತ್ತೇನೆಂದು ನುಡಿಯುತ್ತಾರೆ. ನನಗೆ 2 ಎಕರೆ ಮಾತ್ರ ಮಂಜೂರಾಗಿರುತ್ತದೆ. ನನಗೂ ಕೂಡ ನಾನು ಸಲ್ಲಿಸಿರುವ ದಾಖಲಾತಿಯ ಪ್ರಕಾರ 1 ಎಕರೆ 35 ಗುಂಟೆ ಮಾತ್ರ ಮಂಜೂರಾಗಿರುತ್ತದೆಂದರೆ ಸಾಕ್ಷಿಯು ನನಗೆ 2 ಎಕರೆ ಮಂಜೂರಾಗಿದೆ ಎಂದು ನುಡಿಯುತ್ತಾರೆ. ತಾಲ್ಲೂಕು ಭೂ ಮಾಪನ ಇಲಾಖೆಯವರು ದಿಃ21.11.2007 ರಲ್ಲಿ ಒಂದು ಸ್ಕೆಚ್ ತಯಾರು ಮಾಡಿದ್ದು ಅದರಂತೆ ನನಗೆ ಕೇವಲ 1 ಎಕರೆ 35 ಗುಂಟೆ ಮಾತ್ರ ಮಂಜೂರಾಗಿದೆ ಎಂದರೆ ಸರಿಯಲ್ಲ. ಸರ್ಕಾರದವರು ಕೇವಲ 1 ಎಕರೆ 35 ಗುಂಟೆಯನ್ನು ಮಂಜೂರು ಮಾಡಿದ್ದರು ಸಹಿತ 5 ಗುಂಟೆಯನ್ನು ಅತಿಕ್ರಮ ಮಾಡಲು ಪ್ರಯತ್ನ ಮಾಡುತ್ತಿದ್ದೇನೆಂದರೆ ಸರಿಯಲ್ಲ. ದಾವಾ ಸ್ವತ್ತಿನ ಮೇಲೆ ನನಗೆ ಯಾವುದೇ ಹಕ್ಕು ಸ್ವಾಧೀನ ಇಲ್ಲ ಎಂದರೆ ಸರಿ. ಸಾಕ್ಷಿಯು ನಮ್ಮದು ಪಕ್ಕದ ಜಮೀನು ಎಂದು ನುಡಿಯುತ್ತಾರೆ. ನಾನು ಪದೇ ಪದೇ ವಾದಿಯ ಸ್ವತ್ತಿನ ಸ್ವಾಧೀನಕ್ಕೆ ತೊಂದರೆ ಕೊಡುತ್ತಿದ್ದೇನೆಂದರೆ ಸುಳ್ಳು.

**ಮರುವಿಚಾರಣೆಃ ಇರುವುದಿಲ್ಲ**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓದಿ, ಹೇಳಿ, ಕೇಳಿ ಸರಿ ಇದೆ.

**ಅಪರ ಸಿಜೆ ಮತ್ತು ಜೆ.ಎಂ.ಎಫ್.ಸಿ.,**
**ಕನಕಪುರ.**